# ಕರ್ನಾಟಕ ವಿಧಾನಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1162 |
| ಸದಸ್ಯರ ಹೆಸರು | ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 21.08.2025 |
| ಉತ್ತರಿಸಬೇಕಾದ ಸಚಿವರು | ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ವತಿಯಿಂದ ರಾಜ್ಯದಲ್ಲಿ ಹೊಸ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲು ಚಿಂತಿಸಲಾಗಿದೆಯೇ ಹಾಗೂ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಲಾಗಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು) | ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ವತಿಯಿಂದ 2025-26ನೇ ಸಾಲಿನಲ್ಲಿ ಕೋಲಾರ ಮತ್ತು ರಾಮನಗರ, ಜಿಲ್ಲೆಗಳಲ್ಲಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಹಾಗೂ ಚಿತ್ರದುರ್ಗ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ವಿಜ್ಞಾನ ಪಾರ್ಕ್‌ಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.<br><br>ಕೋಲಾರ : ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ.<br>ರಾಮನಗರ: ಜಿಲ್ಲಾಡಳಿತದಿಂದ ಪರ್ಯಾಯ ಭೂಮಿ ಗುರುತಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.<br>ಚಿತ್ರದುರ್ಗ: ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡುವಂತೆ ಹಾಗೂ ರೂ.20.00 ಕೋಟಿ ಬಿಡುಗಡೆ ಮಾಡುವಂತೆ KMERC ಸಂಸ್ಥೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.<br>ವಿಜಯನಗರ: ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡುವಂತೆ ಹಾಗೂ ರೂ.50.00 ಕೋಟಿ ಬಿಡುಗಡೆ ಮಾಡುವಂತೆ KMERC ಸಂಸ್ಥೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. |
| ಆ) | ರಾಜ್ಯದಲ್ಲಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಸಂಖ್ಯೆ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವತಿಯಿಂದ ಸ್ಥಾಪಿಸಲಾಗಿರುವ/ಸ್ಥಾಪಿಸಲಾಗುತ್ತಿರುವ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಮಾಹಿತಿಯನ್ನು ಅನುಬಂಧ-1 ರಲ್ಲಿ |

| | | |
|---|---|---|
| | | ಇಡಲಾಗಿದೆ. |
| ಇ) | ಹೊಸ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು: (ಸಂಪೂರ್ಣ ಮಾಹಿತಿ ನೀಡುವುದು) | ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ವತಿಯಿಂದ 2025-26ನೇ ಸಾಲಿನಲ್ಲಿ ಕೋಲಾರ ಮತ್ತು ರಾಮನಗರ, ಜಿಲ್ಲೆಗಳಲ್ಲಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ ಹಾಗೂ ಚಿತ್ರದುರ್ಗ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ವಿಜ್ಞಾನ ಪಾರ್ಕ್‌ಗಳನ್ನು ಸ್ಥಾಪಿಸಲಾಗುತ್ತಿದ್ದು, ಸದರಿ ಕೇಂದ್ರಗಳ ಸ್ಥಾಪನೆಗಾಗಿ ಪ್ರಸ್ತುತದವರೆಗೆ ಅನುದಾನವು ಬಿಡುಗಡೆಯಾಗಿರುವುದಿಲ್ಲ. |
| ಈ) | ಕೇಂದ್ರ ಸರ್ಕಾರದ ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬೆಂಗಳೂರು ಬಳಿ ಅತ್ಯಾಧುನಿಕ ವಿಜ್ಞಾನ ನಗರವನ್ನು (ಸೈನ್ಸ್ ಸಿಟಿ) ಸ್ಥಾಪಿಸಲು ಯಾವ ಸ್ಥಳವನ್ನು ಗೊತ್ತುಪಡಿಸಲಾಗಿದೆ ಎಷ್ಟು ಎಕರೆ ಭೂಮಿಯನ್ನು ನಿಗದಿಪಡಿಸಲಾಗಿದೆ; | ಬೆಂಗಳೂರು ನಗರದಲ್ಲಿ ಕೇಂದ್ರ ಸರ್ಕಾರದ ಸಂಸ್ಕೃತಿ ಮಂತ್ರಾಲಯದ ಸಹಭಾಗಿತ್ವದಲ್ಲಿ ಒಟ್ಟು ರೂ.232.70 ಕೋಟಿಗಳ ವೆಚ್ಚದಲ್ಲಿ ವಿಜ್ಞಾನ ನಗರವನ್ನು (Science City) ಸ್ಥಾಪಿಸಲು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ಕ್ರಮವಹಿಸಲಾಗುತ್ತಿದ್ದು, ಸದರಿ ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು (DPR) ತಯಾರಿಸಲಾಗುತ್ತಿದೆ. ಈ ಯೋಜನೆಗೆ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಸಂಸ್ಥೆಯಿಂದ ಆದಿನಾರಾಯಣ ಹೊಸಹಳ್ಳಿ, ಕೈಗಾರಿಕಾ ಪ್ರದೇಶದಲ್ಲಿ 25 ಎಕರೆ ಭೂಮಿಯನ್ನು ಮಂಜೂರು ಮಾಡುವುದಾಗಿ ತಿಳಿಸಲಾಗಿದ್ದು, ಭೂಮಿ ಹಂಚಿಕೆಯ ಕಾರ್ಯವು ಪ್ರಗತಿಯಲ್ಲಿದೆ. |
| ಉ) | ಸಂಚಾರಿ ಡಿಜಿಟಲ್ ತಾರಾಲಯವು ರಾಜ್ಯದಲ್ಲಿನ ಎಷ್ಟು ಸರ್ಕಾರಿ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಗಳನ್ನು ತಲುಪಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) ಪ್ರಸ್ತುತ ತಾರಾಲಯಗಳು ಎಷ್ಟು; ಅದಕ್ಕೆ ಬಿಡುಗಡೆಯಾದ ಅನುದಾನ ಎಷ್ಟು; ಸಂಚಾರಿ ಡಿಜಿಟಲ್ ಕಾರ್ಯಾಲಯಗಳನ್ನು ಹೆಚ್ಚಿಸಲು ಸರ್ಕಾರ ಚಿಂತಿಸಿದೆಯೇ? (ಸಂಪೂರ್ಣ ಮಾಹಿತಿ ನೀಡುವುದು) | ಸಂಚಾರಿ ಡಿಜಿಟಲ್ ತಾರಾಲಯವು ರಾಜ್ಯದಲ್ಲಿನ ಸರ್ಕಾರಿ ಶಾಲಾ/ಕಾಲೇಜುಗಳಿಗೆ ತಲುಪಿರುವ ಮಾಹಿತಿಯನ್ನು ಅನುಬಂಧ-2 ರಲ್ಲಿ ಇಡಲಾಗಿದೆ.<br><br>ಪ್ರಸ್ತುತ ಒಟ್ಟು 11 ಸಂಚಾರಿ ಡಿಜಿಟಲ್ ತಾರಾಲಯಗಳು ಕಾರ್ಯನಿರ್ವಹಿಸುತ್ತಿವೆ.<br><br>11 ಸಂಚಾರಿ ಡಿಜಿಟಲ್ ತಾರಾಲಯ ಯೋಜನೆಗೆ 2016-17 ಸಾಲಿನಿಂದ 2024-25 ನೇ ಸಾಲಿನವರೆಗೆ ಅನುಷ್ಠಾನ ಮತ್ತು ನಿರ್ವಹಣೆಗಾಗಿ ಒಟ್ಟು ರೂ.2923.64 ಲಕ್ಷಗಳು ಬಿಡುಗಡೆಯಾಗಿರುತ್ತದೆ.<br><br>ಸಂಚಾರಿ ಡಿಜಿಟಲ್ ತಾರಾಲಯಗಳನ್ನು ಹೆಚ್ಚಿಸಲು ಮುಂದಿನ ದಿನಗಳಲ್ಲಿ ಅನುದಾನದ |

| | | |
|---|---|---|
| | | ಲಭ್ಯತೆಯ ಆಧಾರದಲ್ಲಿ ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ಐಟಿಬಿಟಿ 304 ಎಸ್‌ಟಿಎಸ್ 2025

(ಎನ್.ಎಸ್. ಭೋಸರಾಜು)
ಮಾನ್ಯ ಸಣ್ಣ ನೀರಾವರಿ,
ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು), ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ಕರ್ನಾಟಕ ವಿಧಾನ ಪರಿಷತ್ತು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1069 (1162) ಕ್ಕೆ ನೀಡಲಾದ ಉತ್ತರಕ್ಕೆ ಅನುಬಂಧ-1

ಸ್ಥಾಪನೆಯಾಗಿರುವ ವಿಜ್ಞಾನ ಕೇಂದ್ರಗಳ ವಿವರ:

| ಕ್ರ. ಸಂ. | ಜಿಲ್ಲೆ | ವಿಜ್ಞಾನ ಕೇಂದ್ರ | ಪ್ರಾರಂಭವಾದ ವರ್ಷ |
|---|---|---|---|
| 1 | ರಾಯಚೂರು | ರಾಯಚೂರು ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | 2018 |
| 2 | ಬೀದರ್ | ಬೀದರ್ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | 2015 |
| 3 | ಬಳ್ಳಾರಿ | ಬಳ್ಳಾರಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | 2014 |
| 4 | ಕಾರವಾರ | ಕಾರವಾರ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | 2017 |
| 5 | ಚಿಕ್ಕಬಳ್ಳಾಪುರ | ಡಾ. ಹೆಚ್. ನರಸಿಂಹಯ್ಯ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | 2019 |
| 6 | ಬಾಗಲಕೋಟೆ | ಬಾಗಲಕೋಟೆ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | 2022 |
| 7 | ದಾವಣಗೆರೆ | ದಾವಣಗೆರೆ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | 2023 |
| 8 | ಕೊಪ್ಪಳ | ಕೊಪ್ಪಳ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | 2023 |
| 9 | ಹಾವೇರಿ | ಹಾವೇರಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | 2024 |
| 10 | ತುಮಕೂರು | ತುಮಕೂರು ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | 2025 |

ಪ್ರಸ್ತುತ ಸ್ಥಾಪಿಸಲಾಗುತ್ತಿರುವ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ವಿವರ

| ಕ್ರ. ಸಂ. | ಜಿಲ್ಲೆ | ವಿಜ್ಞಾನ ಕೇಂದ್ರ | ವಿವರ |
|---|---|---|---|
| 1 | ಕಲಬುರ್ಗಿ | ಚಿತ್ತಾಪುರ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | ಗ್ಯಾಲರಿಗಳ ನಿರ್ಮಾಣಕ್ಕೆ ಟೆಂಡರ್ ಆಹ್ವಾನಿಸಲು ಕ್ರಮವಹಿಸಲಾಗಿದೆ. |
| 2 | ಉಡುಪಿ | ಉಡುಪಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | ಉಡುಪಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ನಿರ್ಮಾಣ ಕಾಮಗಾರಿಯು ಅಂತಿಮ ಹಂತದಲ್ಲಿದೆ. |
| 3 | ಮಂಡ್ಯ | ಆದಿಚುಂಚನಗಿರಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | ಆದಿಚುಂಚನಗಿರಿ (ಮಂಡ್ಯ) ವಿಜ್ಞಾನ ಕೇಂದ್ರದ ಕಟ್ಟಡ ಕಾಮಗಾರಿಯು ಪ್ರಗತಿಯಲ್ಲಿದೆ |
| 4 | ಬೆಳಗಾವಿ | ಬೆಳಗಾವಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ | ಬೆಳಗಾವಿ ಜಿಲ್ಲೆಯ ಹಿಡಕಲ್‌ನಲ್ಲಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರದ ಕಟ್ಟಡ ಕಾಮಗಾರಿಯು ಪ್ರಗತಿಯಲ್ಲಿದೆ. |

| | | | |
|---|---|---|---|
| 5 | ಮಡಿಕೇರಿ | ಮಡಿಕೇರಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರು | ಮಡಿಕೇರಿಯಲ್ಲಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರದ ಕಟ್ಟಡ ಕಾಮಗಾರಿಗೆ ಕಾರ್ಯಾದೇಶವನ್ನು ನೀಡಲಾಗಿದ್ದು, ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದೆ. |
| 6 | ವಿಜಯಪುರ | ವಿಜಯಪುರ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರು | ವಿಜಯಪುರ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ನಿರ್ಮಾಣ ಕಾಮಗಾರಿಗೆ ಕ್ರಮವಹಿಸಲಾಗುತ್ತಿದೆ. |
| 7 | ಉತ್ತರ ಕನ್ನಡ | ಶಿರಸಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರು | ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದೆ. |
| 8 | ಗದಗ | ಗದಗ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರು | ಗದಗ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲಾಗಿದ್ದು, ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ. |
| 9 | ಹಾಸನ | ಹಾಸನ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರು | ಹಾಸನ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲಾಗಿದ್ದು, ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ. |
| 10 | ಚಾಮರಾಜನಗರ | ಚಾಮರಾಜನಗರ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರು | ಚಾಮರಾಜನಗರ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲಾಗಿದ್ದು, ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ. |
| 11 | ಕೋಲಾರ | ಕೋಲಾರ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರು | ಕೋಲಾರ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಸ್ಥಾಪನೆಗೆ ಅಗತ್ಯವಿರುವ ಮಣ್ಣಿನ ಪರೀಕ್ಷೆ (Soil test) ನಡೆಸಲು ಜಿಲ್ಲಾಡಳಿತದಿಂದ ಕ್ರಮವಹಿಸಲಾಗುತ್ತಿದೆ. |
| 12 | ರಾಮನಗರ | ರಾಮನಗರ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರು | ರಾಮನಗರ ಜಿಲ್ಲೆಯಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಸ್ಥಾಪನೆಗೆ ಅಗತ್ಯವಿರುವ ಪರ್ಯಾಯ ಭೂಮಿಯನ್ನು ಒದಗಿಸುವಂತೆ ಜಿಲ್ಲಾಡಳಿತವನ್ನು ಕೋರಲಾಗಿದೆ. |

ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು), ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ಕರ್ನಾಟಕ ವಿಧಾನ ಪರಿಷತ್ತು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1069 (1162) ಕ್ಕೆ ನೀಡಲಾದ ಉತ್ತರಕ್ಕೆ ಅನುಬಂಧ-2

ಸಂಚಾರಿ ಡಿಜಿಟಲ್ ತಾರಾಲಯವು ಜಿಲ್ಲಾವಾರು ತಲುಪಿರುವ ಶಾಲಾ/ಕಾಲೇಜುಗಳ ವಿವರ:

| ಕ್ರ. ಸಂ. | ಜಿಲ್ಲೆ | ಭೇಟಿ ನೀಡಿದ ಸರ್ಕಾರಿ ಶಾಲಾ/ ಕಾಲೇಜುಗಳ ಸಂಖ್ಯೆ | ಭೇಟಿ ನೀಡಿದ ಎನ್‌ಜಿಒಗಳು/ ವಿಜ್ಞಾನ ಕೇಂದ್ರಗಳು/ ಸಾರ್ವಜನಿಕ ಸ್ಥಳಗಳ ಸಂಖ್ಯೆ | ಒಟ್ಟು |
|---|---|---|---|---|
| 1 | ಬಾಗಲಕೋಟೆ | 121 | 0 | 121 |
| 2 | ಬೆಂಗಳೂರು | 20 | 0 | 20 |
| 3 | ಬೆಂಗಳೂರು ಗ್ರಾಮಾಂತರ | 19 | 0 | 19 |
| 4 | ಬೆಳಗಾವಿ | 584 | 0 | 584 |
| 5 | ಬಳ್ಳಾರಿ | 377 | 48 | 425 |
| 6 | ಬೀದರ್ | 459 | 54 | 513 |
| 7 | ವಿಜಯಪುರ | 200 | 0 | 200 |
| 8 | ಚಾಮರಾಜನಗರ | 198 | 37 | 235 |
| 9 | ಚಿಕ್ಕಬಳ್ಳಾಪುರ | 42 | 0 | 42 |
| 10 | ಚಿಕ್ಕಮಗಳೂರು | 21 | 0 | 21 |
| 11 | ಚಿತ್ರದುರ್ಗ | 16 | 0 | 16 |
| 12 | ದಕ್ಷಿಣ ಕನ್ನಡ | 70 | 0 | 70 |
| 13 | ದಾವಣಗೆರೆ | 95 | 0 | 95 |
| 14 | ಧಾರವಾಡ | 142 | 41 | 183 |
| 15 | ಗದಗ | 185 | 51 | 236 |
| 16 | ಕಲಬುರಗಿ | 660 | 52 | 712 |
| 17 | ಹಾಸನ | 30 | 0 | 30 |
| 18 | ಹಾವೇರಿ | 181 | 0 | 181 |
| 19 | ಕೊಡಗು | 20 | 0 | 20 |
| 20 | ಕೋಲಾರ | 19 | 0 | 19 |
| 21 | ಕೊಪ್ಪಳ | 572 | 35 | 607 |
| 22 | ಮಂಡ್ಯ | 149 | 0 | 149 |
| 23 | ಮೈಸೂರು | 247 | 0 | 247 |
| 24 | ರಾಯಚೂರು | 433 | 55 | 488 |
| 25 | ರಾಮನಗರ | 66 | 0 | 66 |
| 26 | ಶಿವಮೊಗ್ಗ | 125 | 0 | 125 |
| 27 | ತುಮಕೂರು | 219 | 41 | 260 |
| 28 | ಉಡುಪಿ | 50 | 0 | 50 |
| 29 | ಉತ್ತರ ಕನ್ನಡ | 74 | 0 | 74 |
| 30 | ಯಾದಗಿರಿ | 505 | 53 | 558 |
| 31 | ವಿಜಯನಗರ | 330 | 52 | 382 |
| ಒಟ್ಟು | | 6229 | 519 | 6748 |

*** ಮೇಲ್ಕಂಡ ಜಿಲ್ಲೆಗಳಲ್ಲಿ ಕೆಲವು ಶಾಲಾ/ಕಾಲೇಜುಗಳಿಗೆ ಸಂಚಾರಿ ತಾರಾಲಯವು ಮರುಭೇಟಿ ನೀಡಿ ತಾರಾಲಯ ಪ್ರದರ್ಶನವನ್ನು ಕೈಗೊಳ್ಳಲಾಗಿರುತ್ತದೆ.